ಮುನ್ನುಡಿಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....

ಸಂಪುಟ : 2 | ಸಂಚಿಕೆ : 2 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಸೆಪ್ಟೆಂಬರ್ 2007

ಮುನ್ನುಡಿ...

## ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠ ವೇತನ..... ಎಷ್ಟು? .... ಏಕೆ?

ಸ್ನೇಹಿತರೇ,

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ನಮಗೆ ದಿನವೊಂದಕ್ಕೆ ಕನಿಷ್ಠ 200 ರೂ. ವೇತನವಾಗಿ ದೊರೆತರೆ, ಈ ಬೆಳೆಯುತ್ತಿರುವ ಬೆಂಗಳೂರಿನಲ್ಲಿ, ಏರಿರುವ ಬೆಲೆಗಳಲ್ಲಿ, ನಾವು ಗೌರವದಿಂದ ಜೀವನ ಮಾಡಬಹುದಲ್ಲವೇ? ಆದರೆ ನಾವು ಒತ್ತಾಯ ಮಾಡಿ ಕೇಳದ ಹೊರತು, ಸರ್ಕಾರ, ಮಾಲೀಕರು ಅಥವಾ ಯಾವುದೇ ವ್ಯವಸ್ಥೆ ನಮಗೆ ಕೊಡುವುದಿಲ್ಲ.

ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ನಮಗೆ ದೊರೆಯುತ್ತಿರುವ ವೇತನವು ನಮ್ಮ ಜೀವನ ನಡೆಸಲು ಎಲ್ಲಾ ರೀತಿಯಿಂದಲೂ ಸಾಕಾಗುತ್ತಿದೆಯೇ? ಕಾರ್ಖಾನೆಯ ಮಾಲೀಕರು, ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ವೇತನವನ್ನು (ರೂ.2200) ಕೊಡುತ್ತಿರುವುದೇ ದೊಡ್ಡದು ಎಂಬಂತೆ ನಡೆದುಕೊಳ್ಳುತ್ತಾರೆ. ಕೆಲವರು ಅದನ್ನೂ ಕೊಡುತ್ತಿಲ್ಲ. ಆದರೆ ನಮಗೆ ವೇತನವನ್ನು ನಿಗದಿ ಮಾಡುವವರು ಯಾರು? ಕಾನೂನು ಪ್ರಕಾರ ಎಷ್ಟು ಕೊಡಬೇಕು? ನಮ್ಮ ಮಾಲೀಕರಿಗೆ ಅದಕ್ಕಿಂತ ಹೆಚ್ಚು ಸಂಬಳ ಕೊಡುವಷ್ಟು ಲಾಭ ಬರುತ್ತಿದೆಯೇ ಈ ಎಲ್ಲಾ ಅಂಶಗಳನ್ನು ತಿಳಿದುಕೊಳ್ಳಲೇಬೇಕು.

ಸರ್ಕಾರವು 2001ರಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ, ದಿನಕ್ಕೆ ರೂ. 92/– ಗಳನ್ನು (ಡಿ.ಎ. ಸೇರಿಸಿ) ಕನಿಷ್ಠ ವೇತನ ನಿಗದಿ ಮಾಡಿದ್ದು, ಇಲ್ಲಿಯವರೆವಿಗೂ ಅದನ್ನು ಪರಿಷ್ಕರಿಸಿರಲಿಲ್ಲ, ಇದೀಗ ಮಾರ್ಚ್ 2007ರಲ್ಲಿ ಕನಿಷ್ಠ ವೇತನ ಪರಿಷ್ಕೃತಗೊಳಿಸಲು ಸೂಚನಾಪತ್ರ (ನೋಟಿಫಿಕೇಷನ್) ಹೊರಡಿಸಿದ್ದು, ಕುಶಲವಲ್ಲದ ಕಾರ್ಮಿಕರಿಗೆ (ಹೆಲ್ಪರ್‌ಗಳಿಗೆ) ರೂ. 98/– (ಡಿ.ಎ ಸೇರಿಸಿ) ನಿಗದಿಪಡಿಸಿದೆ. ಈ ಬಗ್ಗೆ 'ಮುನ್ನಡೆ' ಕೆಳಗಿನ ಅಂಶಗಳನ್ನು ಪ್ರತಿಕ್ರಿಯಿಸುತ್ತಿದೆ.

ಬೆಂಗಳೂರು ನಗರ ಇಂದು ಜಗತ್ತಿನಾದ್ಯಂತ, ಗಾರ್ಮೆಂಟ್ಸ್ ಉತ್ಪಾದನೆಯಲ್ಲಿ, ಪ್ರಮುಖವಾಗಿ ಗುರುತಿಸಿಕೊಳ್ಳುತ್ತಿದೆ. 2004ರ ಮಲ್ಟಿ ಫೈಬರ್ ಅರೇಂಜ್‌ಮೆಂಟ್ ಒಪ್ಪಂದವು ರದ್ದಾದ ಮೇಲೆ ಬೆಂಗಳೂರಿನಲ್ಲಿ ಈ ಉದ್ಯಮ ಬಹು ದೊಡ್ಡ ಮಟ್ಟದಲ್ಲಿ ಹರಡುತ್ತಿದೆ. ವರ್ಷಕ್ಕೆ 300 ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಹಲವಾರು ಕಂಪನಿಗಳಿದ್ದು, ಉದ್ಯಮವು ಸರಿಸುಮಾರು 5 ಲಕ್ಷ ಮಂದಿಗೆ ಉದ್ಯೋಗ ಒದಗಿಸಿವೆ. ಉದ್ಯಮಕ್ಕೆ ಬರುತ್ತಿರುವ ಲಾಭಾಂಶವೂ ಸಹ ಗಣನೀಯವಾಗಿ ಹೆಚ್ಚುತ್ತಿದೆ.

ಈ ಉದ್ಯಮದಲ್ಲಿ ದುಡಿಯುತ್ತಿರುವವರು, ಹೆಚ್ಚಿನ ಮಂದಿ ಮಹಿಳೆಯರಾಗಿದ್ದು, ಉದ್ಯೋಗಕ್ಕಾಗಿ ಗ್ರಾಮೀಣ ಪ್ರದೇಶದಿಂದ ವಲಸೆ ಬಂದವರಾಗಿದ್ದಾರೆ. ಅವರಲ್ಲಿ ಬಹು ಪಾಲು ಮಹಿಳೆಯರು ಏಕಾಂಗಿಯಾಗಿ ಕುಟುಂಬದ ಜವಾಬ್ದಾರಿಯನ್ನು ಹೊತ್ತಿದ್ದು, ತಮ್ಮ ಮೇಲೆ ಅವಲಂಬಿತರಾದ ಇತರ ಕುಟುಂಬ ಸದಸ್ಯರನ್ನು ನೋಡಿಕೊಳ್ಳುತ್ತಿದ್ದಾರೆ. ಈ ಕಾರ್ಮಿಕರಿಗೆಲ್ಲರಿಗೂ ಸರ್ಕಾರದಿಂದ ನಿಗದಿಯಾದ ಕನಿಷ್ಠ ವೇತನವೇ ದೊರೆಯುತ್ತಿದ್ದು, ಎಷ್ಟೋ ಮಂದಿ ಅದಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದಾರೆ, ಯಾವುದೇ ಹೆಚ್ಚುವರಿ ಭತ್ಯೆಯಿಲ್ಲದೆ ಎಂಟು ಗಂಟೆಯ ಕೆಲಸದ ಅವಧಿಯ ನಂತರವೂ ದುಡಿಯುತ್ತಿದ್ದಾರೆ. ಅತ್ಯಂತ ವಿಸ್ತೃತವಾಗಿ ಹರಡುತ್ತಿರುವ, ಲಾಭದಲ್ಲಿ ನಡೆಯುತ್ತಿರುವ ಗಾರ್ಮೆಂಟ್ಸ್ ಉದ್ಯಮದಲ್ಲಿ ಈ ಶೋಷಣೆಗೊಳಗಾಗುತ್ತಿರುವ ಕಾರ್ಮಿಕರಿಗೆ ನ್ಯಾಯಯುತ ವೇತನ ಸಿಗಬೇಕೆಂದು ಮುನ್ನಡೆ ಈ ಮೂಲಕ ಆಗ್ರಹಿಸುತ್ತಿದೆ.

1986ರಲ್ಲಿ ಸರ್ಕಾರವು, ಗಾರ್ಮೆಂಟ್ಸ್ ಉದ್ಯಮಕ್ಕೆ ಅಂದಿನ ಜೀವನ ನಿರ್ವಹಣಾ ವೆಚ್ಚದ ಆಧಾರದ ಮೇಲೆ ರೂ. 18/– ಗಳನ್ನು ಕನಿಷ್ಠ ವೇತನವನ್ನಾಗಿ ನಿಗದಿ ಮಾಡಿತ್ತು, ಆದರೆ 2007ರ ಮಾರ್ಚ್‌ನಲ್ಲಿ ನಿಗದಿ ಮಾಡಿರುವ 98/– ರೂ.ಗಳು 20 ವರ್ಷಗಳ ಹಿಂದಿನ ವೆಚ್ಚಕ್ಕೆ ಹೋಲಿಸಿದರೂ ರೂ. 16/– ಮಾತ್ರ ಆಗುತ್ತದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಅಂದರೆ, ಕಾರ್ಮಿಕರ ವೇತನದಲ್ಲಿ ಯಾವುದೇ ಹೆಚ್ಚಳವಾಗಿಲ್ಲ, ಬದಲಿಗೆ ಇನ್ನೂ ಇನ್ನೂ ಕಡಿಮೆಯೇ ಆಗುತ್ತಿದೆ. ಇದು ಗಾರ್ಮೆಂಟ್ಸ್ ಕಾರ್ಮಿಕರಿಗಾಗುತ್ತಿರುವ ಬಹು ದೊಡ್ಡ ಅನ್ಯಾಯವಾಗಿದೆ.

2. ಒಬ್ಬ ಮನುಷ್ಯ ತನ್ನ ಒಬ್ಬನ ದುಡಿಮೆಯಿಂದ ಕುಟುಂಬದ ಮೂಲಭೂತ ಅವಶ್ಯಕತೆಗಳಾದ ಆಹಾರ ಬಟ್ಟೆ, ಹಾಗೂ ವಸತಿಗಳೊಂದಿಗೆ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಇವುಗಳೆಲ್ಲವನ್ನು ಪೂರೈಸಿಕೊಳ್ಳಬಹುದಾದಷ್ಟು ವೇತನವನ್ನು ಕನಿಷ್ಠ ವೇತನವನ್ನಾಗಿ ನಿಗದಿ ಮಾಡಬೇಕೆಂದು ನ್ಯಾಯಾಲಯದ ಆದೇಶಗಳು ಎತ್ತಿ ಹೇಳುತ್ತವೆ.

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಸುಮಾರು 200 ಮಂದಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಸಂದರ್ಶಿಸಿ ಸಂಗ್ರಹಿಸಲಾದ ವರದಿಯ ಪ್ರಕಾರ ಒಬ್ಬ ಗಾರ್ಮೆಂಟ್ಸ್‌ನಲ್ಲಿ ದುಡಿಯುತ್ತಿರುವ ಮಹಿಳೆ ತನ್ನ ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ ಈ ಕೆಳಗಿನಂತೆ ಖರ್ಚು ಮಾಡುತ್ತಾಳೆ.

| | | |
|---|---|---|
| ಆಹಾರ | ರೂ. | 2092.50 |
| ಬಾಡಿಗೆ | | 965.25 |
| ವಿದ್ಯಾಭ್ಯಾಸ | | 296.70 |
| ಆರೋಗ್ಯ | | 427.50 |
| ಇತರೆ | | 582.23 |
| | ಒಟ್ಟು | 4316.05 |

ಮೇಲ್ಕಂಡ ಲೆಕ್ಕಾಚಾರದಂತೆ, ಒಬ್ಬ ಮಹಿಳೆ ತನ್ನ ಕುಟುಂಬಕ್ಕೆ ತಿಂಗಳಿಗೆ ಸರಾಸರಿ 4300 ರೂ.ಗಳನ್ನು ಖರ್ಚು ಮಾಡುತ್ತಿದ್ದಾಳೆ. ಇಷ್ಟು ಅಗತ್ಯಗಳನ್ನು ತಮ್ಮ ಇತರ ಕುಟುಂಬದ ಸದಸ್ಯರ ದುಡಿಮೆಯಿಂದ ಪೂರೈಸಿಕೊಳ್ಳುತ್ತಿದ್ದಾಳೆ. ಬೇರೆ ಯಾರೂ ದುಡಿಯುವ ಸದಸ್ಯರು ಇರದ ಮಹಿಳೆಯರು ಪ್ರತಿ ತಿಂಗಳೂ ಸಾಲದ ಮೊರೆ ಹೋಗುತ್ತಿದ್ದಾರೆ. ಮೇಲಿನ ಪಟ್ಟಿಯಲ್ಲಿ ಯಾವುದೇ ರೀತಿಯ ಉಳಿತಾಯವಾಗಲಿ, ತುರ್ತು ಅಗತ್ಯಗಳಾಗಲೀ ಸೇರಿಲ್ಲ.

ಆದರೆ ಈಗ ಸರ್ಕಾರವು ನಿಗದಿ ಪಡಿಸಿರುವ ರೂ. 98ಗಳ ಕನಿಷ್ಠ ವೇತನವು ಕಾರ್ಮಿಕರ ಅರ್ಧದಷ್ಟು ಅವಶ್ಯಕತೆಗಳನ್ನು ಮಾತ್ರ ಪೂರೈಸುತ್ತಿದೆ.

3. ಉದ್ಯಮವು ಇಂದು ಅತ್ಯಂತ ಗಣನೀಯವಾಗಿ ಬೆಳೆಯುತ್ತಿದ್ದು, ಪ್ರತಿಬಾರಿ ಕಾರ್ಮಿಕರ ವೇತನವನ್ನು ಹೆಚ್ಚು ಮಾಡಬೇಕೆಂಬ ಪ್ರಸ್ತಾಪ ಬಂದಾಗ ಮಾಲೀಕರು ತಮಗೆ ಅಷ್ಟು ಕೊಡುವ ಶಕ್ತಿ ಇಲ್ಲ, ನಮಗೆ ಅಷ್ಟು ಲಾಭ ಬರುತ್ತಿಲ್ಲವೆಂದೇ ಪ್ರತಿಕ್ರಿಯಿಸುತ್ತಾರೆ.

ಆದರೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಇಲ್ಲಿಯವರೆಗೂ ನಡೆಸಿದ ಅಧ್ಯಯನ, ಉದ್ಯಮಿಗಳೊಂದಿಗೆ ನಡೆಸಿರುವ ಚರ್ಚೆಗಳನ್ನು ವಿಶ್ಲೇಷಿಸಿದರೆ ಉದ್ಯಮವು ಸುಲಭವಾಗಿ ಕಾರ್ಮಿಕರ ವೇತನವನ್ನು ಹೆಚ್ಚಿಸಲು ಶಕ್ತವಾಗಿದೆ. ಯುರೋಪಿನಲ್ಲಿ ಒಂದು ಗಾರ್ಮೆಂಟ್‌ನ ಮಾರಾಟ ಬೆಲೆಗೆ ಹೋಲಿಸಿದರೆ ಕಾರ್ಮಿಕರ ಈಗಿನ ವೇತನ ಅದರಲ್ಲಿ ಶೇಕಡಾ 3ರಷ್ಟು ಮಾತ್ರ ಆಗುತ್ತದೆ. ಆದ್ದರಿಂದ ಕಾರ್ಮಿಕರ ವೇತನವನ್ನು ಈಗಿರುವುದಕ್ಕಿಂತ ಎರಡು ಪಟ್ಟು ಹೆಚ್ಚಿಸಿದರೂ ಉದ್ಯಮಕ್ಕೆ ಯಾವುದೇ ನಷ್ಟವಿಲ್ಲ ಎಂದು ಕಂಡುಬರುತ್ತದೆ.

ಈ ಅಂಶಗಳನ್ನು ಗಮನಿಸಿ, ಸರ್ಕಾರವು ಮಾರ್ಚ್ 29, 2007 ರಂದು ಹೊರಡಿಸಿರುವ ಸೂಚನಾ ಪತ್ರವನ್ನು ಬದಲಿಸಿ, ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನಕ್ಕೆ ಕನಿಷ್ಠ ರೂ. 200ಗಳಷ್ಟಾದರೂ ಹೆಚ್ಚಿಸಬೇಕು. ಎಂದು ಮುನ್ನಡೆ ಈ ಮೂಲಕ ಆಗ್ರಹಿಸುತ್ತದೆ.

* * *

ದಿನಾಂಕ 8.8.2007 ರಂದು ರಾಜಗೋಪಾಲನಗರದಲ್ಲಿರುವ ಲೀಲಾಸ್ಕಾಟಿಶ್‌ಲೇಸ್ ಪ್ರೈ. ಲಿ. ನ ಬಳಿ ಪ್ರತಿಭಟನಾ ನಿರತ ಕಾರ್ಮಿಕರ ಮೇಲೆ ಪೊಲೀಸರು ನಡೆಸಿದ ಲಾಠಿ ಚಾರ್ಜ್ ಹಾಗೂ ದೌರ್ಜನ್ಯವನ್ನು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ಖಂಡಿಸುತ್ತಿದೆ.

ಕಳೆದ ತಿಂಗಳು ಜುಲೈ 20 ರಿಂದಲೂ ಕಾರ್ಮಿಕರು ಈ ಪ್ರತಿಭಟನೆ ನಡೆಸುತ್ತಿದ್ದು, ದಿನಾಂಕ 8.8.2007 ರಂದು ಬೆಳಿಗ್ಗೆ 8.30 ರಿಂದ 9 ಗಂಟೆಯ ಒಳಗೆ, ಈ ಘಟನೆ ನಡೆದಿದೆ. ಪ್ರತಿಭಟನೆ ನಡೆಸುತಿದ್ದ ಕಾರ್ಮಿಕರೆಲ್ಲರೂ ಮಹಿಳೆಯರಾಗಿದ್ದು, ತಮ್ಮ ಬೇಡಿಕೆಯನ್ನು ಈಡೇರಿಸಿ ಕೊಳ್ಳಲು, ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದರು. ಮಾಲೀಕರು ಕಾರ್ಮಿಕರನ್ನು ನೇರವಾಗಿ ಸಂಪರ್ಕಿಸದೆ, ಪ್ರತಿಭಟನೆಯ ಕಾರಣ ಕೇಳದೆ, ಮೌನ ವಹಿಸಿ, ಪೊಲೀಸ್ ಸಹಕಾರದಿಂದ ಕಾರ್ಮಿಕರನ್ನು ಹತ್ತಿಕ್ಕಲು ಯತ್ನಿಸಿದ್ದಾರೆ. ಘಟನೆಯಲ್ಲಿ, ಹದಿಮೂರು ಮಂದಿ ತೀವ್ರವಾಗಿ ಗಾಯ ಗೊಂಡು ನಗರದ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಹಿಳಾ ಕಾರ್ಮಿಕರಿಗೊಬ್ಬರಿಗೆ ಗರ್ಭಪಾತವಾಗಿದ್ದು, ಅಪಾರ ನೋವುಗಳು ಸಂಭವಿಸಿದೆ.

ಕಾರ್ಮಿಕ ಚಳವಳಿಯ ಇತಿಹಾಸದಲ್ಲಿ, ಬಂಡವಾಳಶಾಹಿ ವ್ಯವಸ್ಥೆ ಹಾಗೂ ಸರ್ಕಾರಗಳು, ಕಾರ್ಮಿಕರ ವಿರುದ್ಧ ತಮ್ಮ ಶಕ್ತಿ ಪ್ರದರ್ಶನ ನಡೆಸುತ್ತಲೇ ಬಂದಿವೆ. ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು, ಸಂಘಟಿತರಾಗಿ ಹೋರಾಟ ನಡೆಸುವುದು ಕಾರ್ಮಿಕರ ಸಂವಿಧಾನ ಬದ್ಧ ಹಕ್ಕಾಗಿದೆ. ಆದರೆ, ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಮಹಿಳಾ ಕಾರ್ಮಿಕರ ಗುಂಪಿನ ಮೇಲೆ ಪೊಲೀಸರು ಲಾಠಿಚಾರ್ಜ್ ಮಾಡುವ ಮೂಲಕ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ.

ಕಾರ್ಮಿಕರು ಮುಂದಿಟ್ಟ ಅಲ್ಪ ಬೇಡಿಕೆಯನ್ನು ಮಾಲೀಕರು ಮನ್ನಿಸದೆ, ಅವರನ್ನು ನೇರವಾಗಿ ಸಂಪರ್ಕಿಸಿ ಸಮಸ್ಯೆ ಬಗೆಹರಿಸದೆ, ಅವರ ಮೇಲೆ ಬಲ ಪ್ರದರ್ಶನ ನಡೆಸಿದ್ದಾರೆ.

ಪೊಲೀಸರು ನಡೆಸಿದ ಈ ದೌರ್ಜನ್ಯವನ್ನು ಖಂಡಿಸಿ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು ದಿನಾಂಕ 9.8.2007 ರಂದು ಸಂಜೆ 6 ಗಂಟೆಗೆ ಟೌನ್ ಹಾಲ್ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿತು. ಜೊತೆಗೆ, ಘಟನೆಯಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ನ್ಯಾಯಾಂಗ ತನಿಖೆ ನಡೆಸಬೇಕು ಹಾಗೂ ಗಾಯಗೊಂಡ ಕಾರ್ಮಿಕರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಈ ಮೂಲಕ ಬಲವಾಗಿ ಆಗ್ರಹಿಸುತ್ತಿದೆ. ❑

## ಕನಿಷ್ಠ ವೇತನ ಆಂದೋಲನ – 2007

ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನವೊಂದಕ್ಕೆ ಕನಿಷ್ಠ 200 ರೂ.ಗಳನ್ನಾದರೂ ವೇತನವನ್ನು ನಿಗದಿಪಡಿಸಬೇಕೆಂದು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಹಾಗೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಜಂಟಿಯಾಗಿ ಕನಿಷ್ಠ ವೇತನ ಆಂದೋಲನ –2007 ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೇಡಿಕೆಯನ್ನು ಆಗ್ರಹಿಸಿ ಕಾರ್ಮಿಕ ಮಂತ್ರಿಗಳಿಗೆ ಮೆಮೊರಾಂಡಮ್ ನೀಡುವುದು ಸೇರಿದಂತೆ, ಪತ್ರಿಕಾ ಗೋಷ್ಠಿ ನಡೆಸುವುದು, ಕಾರ್ಖಾನೆಗಳ ಬಳಿ ಕಾರ್ಮಿಕರಿಗೆ ಕರಪತ್ರಗಳನ್ನು ಹಂಚುವುದು, ಸ್ಥಳೀಯ ಮಟ್ಟದಲ್ಲಿ ಸಣ್ಣಸಣ್ಣ ಸಭೆಗಳನ್ನು ನಡೆಸುವುದು, ಬೀದಿ ನಾಟಕಗಳನ್ನು ಆಯೋಜಿಸುವುದು, ಕಾರ್ಮಿಕರ ಮನೆಮನೆಗೆ ಹೋಗಿ ಸಹಿ ಸಂಗ್ರಹಣೆ ಮಾಡುವುದು, ಭಿತ್ತಿಪತ್ರಗಳನ್ನು ಗೋಡೆಯ ಮೇಲೆ ಅಂಟಿಸುವುದು ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಕಾರ್ಮಿಕರೆಲ್ಲರೂ ಈ ಕಾರ್ಯಗಳಿಗೆ ತಮ್ಮ ಸಂಪೂರ್ಣ ಬೆಂಬಲ ನೀಡಿ ಆಂದೋಲನವನ್ನು ಯಶಸ್ವಿಗೊಳಿಸಬೇಕಾಗಿ 'ಮುನ್ನಡೆ' ಈ ಮೂಲಕ ಕೇಳಿಕೊಳ್ಳುತ್ತಿದೆ.



Scanned with OKEN Scanner

ಸ್ನೇಹಿತರೇ,

ಬೆಂಗಳೂರಿನ ವಿವಿಧ ಕಾರ್ಖಾನೆಗಳಲ್ಲಿ ಕೆಲಸದಿಂದ ನಿರಾಕರಿಸಲ್ಪಟ್ಟ ಕಾರ್ಮಿಕರು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಬೆಂಬಲದಿಂದ ಪರಿಹಾರ ಪಡೆದ ಘಟನೆಗಳು ಈ ಕೆಳಗೆ ಇವೆ.

## ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್ ಕಾರ್ಮಿಕರಿಗೆ ಸುಮಾರು 30 ಲಕ್ಷ ರೂ.ಗಳ ಪರಿಹಾರ!

ಸ್ನೇಹಿತರೇ, ಚಿಕ್ಕಲಸಂದ್ರದ ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್‌ನ ಮಹಿಳಾ ಕಾರ್ಮಿಕರು ಒಗ್ಗಟ್ಟಾಗಿ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ನ ಸತತ ಪ್ರಯತ್ನದಿಂದ ಮಾಲೀಕರಿಂದ ಒಟ್ಟು ಸುಮಾರು 30 ಲಕ್ಷ ರೂ.ಗಳ ಪರಿಹಾರ ಪಡೆದು ಗಾರ್ಮೆಂಟ್ಸ್ ಉದ್ಯಮದಲ್ಲಿ ಚರಿತ್ರಾರ್ಹ ಘಟನೆಯೊಂದನ್ನು ದಾಖಲಿಸಿದ್ದಾರೆ.

ಕಾರ್ಖಾನೆಯು ಇದ್ದಕ್ಕಿದ್ದಂತೆ ಮುಚ್ಚಿ, ಕಾರ್ಮಿಕರೆಲ್ಲರಿಗೂ ಮೈಸೂರು ರಸ್ತೆಯ ರಿಬೌಂಡ್ ಎಕ್ಸ್‌ಪೋರ್ಟ್ಸ್‌ನಲ್ಲಿ ಕೆಲಸ ಮಾಡಲು ಆಡಳಿತ ವರ್ಗದವರು ಹೇಳಿದಾಗ, ಸುಮಾರು 250 ಮಂದಿ ಮಹಿಳಾ ಕಾರ್ಮಿಕರು ಒಟ್ಟಾಗಿ ತಿರುಗಿಬಿದ್ದು, ಪ್ರತಿಭಟಿಸಿದರು. ತಾವು ಅಷ್ಟು ದೂರ ಕೆಲಸಕ್ಕೆ ಹೋಗುವುದಿಲ್ಲವೆಂದೂ, ಇಲ್ಲಿಯೆ ಕೆಲಸ ಕೊಡಿ ಇಲ್ಲವೇ ನಮಗೆ ಪರಿಹಾರ ಕೊಡಿ ಎಂದು ಕಾರ್ಖಾನೆಯ ಮುಂದೆ ಧರಣಿ ಕುಳಿತರು. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಮಧ್ಯೆ ಪ್ರವೇಶಿಸಿದುದರಿಂದ, ದಿನಾಂಕ 25.7.2007 ರಂದು ಮಾಲೀಕರು ಪ್ರತಿ ಕಾರ್ಮಿಕರಿಗೆ 10 ರಿಂದ 12 ಸಾವಿರದಷ್ಟು ಪರಿಹಾರ ನೀಡಿದರು.



ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ 'ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರೀಸ್' ಮುಚ್ಚಿದ ಕಾರಣ, ಮೂರು ತಿಂಗಳ ವೇತನವನ್ನು ಪರಿಹಾರವಾಗಿ ನೀಡುವಂತೆ ಒತ್ತಾಯಿಸಿ ಪ್ರತಿಭಟನಾ ನಿರತ ಕಾರ್ಮಿಕರು

ಗಾರ್ಮೆಂಟ್ಸ್ ಇತಿಹಾಸದಲ್ಲಿ ಈ ರೀತಿಯ ಪರಿಹಾರ ಇದೇ ಮೊದಲು ಎನ್ನಬಹುದು. ತಮಗೆ ಇಷ್ಟ ಬಂದಾಗ ಕಾರ್ಖಾನೆ ಮುಚ್ಚಿ ಕಾರ್ಮಿಕರನ್ನು ಶೋಷಿಸುತ್ತಿದ್ದ ಮಾಲೀಕರಿಂದ ತೊಂದರೆಗೊಳಗಾದ ಕಾರ್ಮಿಕರು ಇನ್ನು ಮುಂದೆ ಅಸಹಾಯಕತೆಯಿಂದ ಕೈಚೆಲ್ಲಿ ಕೂರುವಂತಿಲ್ಲ. ಟೆಕ್ಸ್‌ಪೋರ್ಟ್ಸ್ ಇಂಡಸ್ಟ್ರಿಯ ಕಾರ್ಮಿಕರಿಂದ ಸ್ಫೂರ್ತಿ ಪಡೆದುಕೊಳ್ಳಬೇಕು. ನಮಗೆ ಕಾನೂನು ಪ್ರಕಾರ ಸಿಗಬೇಕಾದ ಪರಿಹಾರ ಮಾಲೀಕರು ಕೊಡಲೇಬೇಕು.

## ನಗದು ಪರಿಹಾರ ಪಡೆದ ಟೆಕ್ಸ್‌ಪೋರ್ಟ್ಸ್ ಓವರ್‌ಸೀಸ್‌ನ ಕಾರ್ಮಿಕರು

ತಮಗಾದ ಅನ್ಯಾಯದ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದ, ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್‌ನ 6 ಮಂದಿ ಕಾರ್ಮಿಕರು ಕೊನೆಗೂ ನ್ಯಾಯ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಸಾಕಮ್ಮ, ನರಸಮ್ಮ, ಸುನಂದಮ್ಮ, ಕಲಾ, ನಾಗರತ್ನ ಹಾಗೂ ಹೇಮಾ ಎಂಬ ಮಹಿಳಾ ಕಾರ್ಮಿಕರು ಮೈಸೂರು ರಸ್ತೆಯಲ್ಲಿ ಟೆಕ್ಸ್‌ಪೋರ್ಟ್ಸ್ ಓವರ್‌ಸೀಸ್‌ನ ಘಟಕವಾದ ಟೆಕ್ಸ್‌ಪೋರ್ಟ್ಸ್ ಕ್ರಿಯೇಶನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು, ಇದ್ದಕ್ಕಿದ್ದಂತೆ ಕೆಲಸದಿಂದ ನಿರಾಕರಿಸಲ್ಪಟ್ಟಿದ್ದರು. ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಬೆಂಬಲದಿಂದ ನ್ಯಾಯಾಲಯದ ಮೊರೆ ಹೋಗಿದ್ದರು.

2007ರ ಮೇ ತಿಂಗಳಿನಲ್ಲಿ ಈ ಎಲ್ಲಾ ಕಾರ್ಮಿಕರಿಗೂ ಸರಾಸರಿ ತಲಾ 40,000/– ಸಾವಿರ ರೂ. ಪರಿಹಾರ ದೊರೆತು, ನ್ಯಾಯಯುತ ಹೋರಾಟಕ್ಕೆ ಫಲ ಸಿಗುತ್ತದೆ ಎಂಬುದಕ್ಕೆ ಈ ಕಾರ್ಮಿಕರು ಸಾಕ್ಷಿಯಾಗಿದ್ದಾರೆ.

## ಭಾನುಗಾರ್ಟೆಕ್ಸ್‌ನಿಂದ ಪರಿಹಾರ ಪಡೆದ ಕಾರ್ಮಿಕರು

ಮೇಲೆ ಹೇಳಿದ ರೀತಿಯಲ್ಲಿಯೇ ಮತ್ತೊಂದು ಕಾರ್ಖಾನೆಯ 25 ಕಾರ್ಮಿಕರು GATWUವಿನ ಮಧ್ಯೆ ಪ್ರವೇಶದಿಂದ ಸುಮಾರು 2 ಲಕ್ಷ ರೂ.ಗಳ ಪರಿಹಾರ ಪಡೆದಿದ್ದಾರೆ.

ಪೀಣ್ಯದ ಮಾದಾವರ ಪ್ರದೇಶದಲ್ಲಿರುವ ಭಾನು ಗಾರ್ಟೆಕ್ಸ್ ಕಾರ್ಖಾನೆಯ ಆಡಳಿತವರ್ಗವು, ಕೆಲಸ ಬಿಟ್ಟ ಕಾರ್ಮಿಕರಿಗೆ ಎಂದೂ ಅವರಿಗೆ ಸೇರಬೇಕಾದ ಗ್ರಾಚ್ಯುಟಿ ಹಣವನ್ನಾಗಲೀ, ಬೋನಸ್ ಆಗಲೀ ಯಾವ ಹಣವನ್ನೂ ನೀಡುತ್ತಿರಲಿಲ್ಲ. ದಿನಾಂಕ 10.7.2007 ರಂದು ಸುಮಾರು 25 ಮಂದಿ ಸಾಮೂಹಿಕವಾಗಿ ರಾಜೀನಾಮೆ ನೀಡಿ GATWUವನ್ನು ಸಂಪರ್ಕಿಸಿದರು. GATWU ಆಡಳಿತ ವರ್ಗದವರೊಂದಿಗೆ ಮಾತನಾಡಿ, ಪ್ರತಿಯೊಬ್ಬ ಕಾರ್ಮಿಕರಿಗೂ ಸುಮಾರು 8 ರಿಂದ 10 ಸಾವಿರದಷ್ಟು ಪರಿಹಾರ ದೊರಕಿತು.

ಈ ಉದಾಹರಣೆಗಳಿಂದ ಕೆಲಸ ಬಿಟ್ಟೊಡನೆ, ಅಥವಾ ಕೆಲಸದಿಂದ ಇದ್ದಕ್ಕಿದ್ದಂತೆ ತೆಗೆದುಹಾಕಿದಾಗ ಬರಿಗೈಯಲ್ಲಿ ಮನೆಗೆ ಮರಳುತ್ತಿದ್ದ ಕಾರ್ಮಿಕರು ಇಂದು ಕಾನೂನು ಬಳಸಿದರೆ ಪರಿಹಾರ ಪಡೆಯಬಹುದು ಎಂದು ಸಾಬೀತಾಗುತ್ತದೆ.



Scanned with OKEN Scanner

# ಮಹಿಳಾ ಕಾರ್ಮಿಕರ ಆತ್ಮವಿಶ್ವಾಸ ಹೆಚ್ಚಿಸುತ್ತಿರುವ ಸ್ವಸಹಾಯ ಸಂಘ

"ನನ್ನ ಮಗೂನ್ನ ಆಸ್ಪತ್ರೆಗೆ ಸೇರಿಸಿದ್ವೆ, ಕೈಯಲ್ಲಿ ಒಂದ್ಕಾಸೂ ಇರಲಿಲ್ಲ. ಸಂಘದಿಂದ ಐದು ಸಾವಿರ ಸಾಲ ಸಿಕ್ಕಿದ್ದಕ್ಕೆ ತುಂಬಾ ಸಹಾಯ ಆಯ್ತು"

"ಇದ್ದಕ್ಕಿದ್ದಂತೆ ಓನರ್ ಮನೇ ಬಿಡಿ ಅಂತ ಗಲಾಟೆ ಮಾಡ್ಬಿಟ್ರು, ಬೇರೆ ಮನೆಗೆ ಹೆಚ್ಚು ಅಡ್ವಾನ್ಸ್ ಕೊಡೋ ಸ್ಥಿತೀಲಿ ನಾನಿಲ್ಲ. ನಮಗ್ಯಾರು ತಕ್ಷಣ ಸಾಲ ಕೊಡ್ತಾರೆ? ಸಂಘ ಇದ್ದದ್ದಕ್ಕೆ ನನ್ನ ಮನೆ ಉಳೀತು"

"ಮಗೂ ಸ್ಕೂಲ್ ಅಡ್ಮಿಷನ್‌ಗೆ ಲಾಸ್ಟ್‌ಡೇಟ್ ಆಗೋಗಿತ್ತು, ಸಂಘದಿಂದ ಸಾಲ ತಗೊಂಡಿದ್ದಕ್ಕೆ ಸರಿ ಹೋಯ್ತು"

ಸ್ನೇಹಿತರೇ, ಇದಾವ ಸಂಘ ಎಂದು ಅಚ್ಚರಿ ಪಡುತ್ತಿದ್ದೀರಾ? ಮೈಸೂರು ರಸ್ತೆಯ ಸುಮಾರು 15 ಕಾರ್ಖಾನೆಗಳ ಮಹಿಳಾ ಕಾರ್ಮಿಕರು ಸೇರಿ ರಚಿಸಿಕೊಂಡಿರುವ ಸ್ತ್ರೀ ಶಕ್ತಿ ಮಾದರಿಯ 29 ಸಂಘಗಳು ಮಹಿಳೆಯರ ತುರ್ತು ಅಗತ್ಯಗಳನ್ನು ತಕ್ಷಣಕ್ಕೆ ಪೂರೈಸುತ್ತಾ, ಅವರಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನು ಸಂಘಟಿಸುವ ನಿಟ್ಟಿನಲ್ಲಿ, ಸಿವಿಡೆಪ್ ಇಂಡಿಯಾ ಸ್ವಯಂ ಸೇವಾ ಸಂಸ್ಥೆಯು ಅವರ ಕಾರ್ಮಿಕ ಹಕ್ಕುಗಳನ್ನು ತಿಳಿಸಿಕೊಡಲು ಪ್ರಯತ್ನಿಸಿದಾಗ, ಕಾರ್ಮಿಕರು ನಿರಾಕರಿಸಿದ್ದೇ ಹೆಚ್ಚು. ಯಾವುದೇ ಸಂಘಟನೆಯ ಕಲ್ಪನೆ ಇಲ್ಲದೆ ಯೂನಿಯನ್ ಎಂಬ ಪದವನ್ನು ಭೂತದ ರೀತಿ ನೋಡುತ್ತಿದ್ದವರಿಗೆ ಕಾರ್ಮಿಕ ಕಾನೂನುಗಳನ್ನು ತಿಳಿದುಕೊಳ್ಳುವುದು ಅಪರಾಧ ಎಂದೇ ಅವರ ಅಭಿಪ್ರಾಯವಾಗಿತ್ತು.

ಸಿವಿಡೆಪ್ ಸಂಸ್ಥೆಯು, ಹಲವಾರು ಕಾರ್ಮಿಕರ ಸಂದರ್ಶನ ನಡೆಸಿದಾಗ, ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಈ ಮಹಿಳೆಯರು ಕೆಲಸದ ಭದ್ರತೆಯಿಲ್ಲದೆ, ಕಾರ್ಖಾನೆಯಲ್ಲಿ ಅನೇಕ ರೀತಿಯ ಶೋಷಣೆಗಳನ್ನೆದುರಿಸುತ್ತಿದ್ದು, ಆರ್ಥಿಕವಾಗಿಯೂ ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದು ಕಂಡುಬಂದಿತು. ಮನೆಯ ಅಗತ್ಯಗಳಿಗಾಗಿ 5ರಿಂದ 10% ಸಾಲ ಪಡೆದು, ಪಡೆದ ಸಂಬಳವನ್ನು ಬಡ್ಡಿಗೇ ಕಟ್ಟೀ ಮನೆಗೆ ಅತ್ಯಲ್ಪ ಹಣವನ್ನು ಮನೆಗೊಯ್ಯುವುದು, ಮತ್ತೆ ಮನೆ ಖರ್ಚು ತೂಗಿಸಲು ಸಾಲ ಮಾಡುವುದು ಈ ವಿಷವರ್ತುಲದಲ್ಲಿ ಸಿಲುಕಿದ್ದರು.

ಆಗ ನೆರವಾದುದು, ಕರ್ನಾಟಕ ಸರ್ಕಾರದ ಒಂದು ಯೋಜನೆಯಾದ ಸ್ತ್ರೀಶಕ್ತಿ ಯೋಜನೆಯ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಸ್ವಸಹಾಯ ಸಂಘದ ಕಲ್ಪನೆ. ಈ ಕಾರ್ಖಾನೆಗಳಲ್ಲಿ 15ರಿಂದ 20 ಮಂದಿ ಕಾರ್ಮಿಕರು ಸೇರಿ ತಿಂಗಳಿಗೆ 100 ರೂ.ಗಳನ್ನು ಉಳಿಸಿ, ಸುಮಾರು 6 ತಿಂಗಳ ನಂತರ ಆಂತರಿಕ ಸಾಲ ಪ್ರಕ್ರಿಯೆಯನ್ನು ಆರಂಭಿಸುವ ಈ ಯೋಜನೆ



ತಿಂಗಳಿಗೊಮ್ಮೆ ನಡೆಯುವ ಸಭೆಯಲ್ಲಿ ಕಾರ್ಮಿಕರು ಹಣಕಾಸಿನ ವಿಚಾರವಲ್ಲದೆ ತಮ್ಮ ಕಾರ್ಖಾನೆಯ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಿರುವುದು.

ಇಂದು ಅತ್ಯಂತ ಯಶಸ್ವಿಯಾಗಿ ನಡೆದು ಮಹಿಳೆಯರು ನಿರಂತರ ಉಳಿತಾಯದ ಜೊತೆಗೆ, ಅತಿ ಹೆಚ್ಚೆಂದರೆ ರೂ. 20,000 ವರೆಗೂ ಸಾಲ ಪಡೆದು ತಮ್ಮ ತುರ್ತು ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ತಿಂಗಳಿಗೆ ಎರಡು ಲಕ್ಷದವರೆಗೂ ವ್ಯವಹಾರ ನಡೆಸುವ ಈ ಸಂಘಗಳು ಯಾವುದೇ ಸಹಕಾರಿ ಬ್ಯಾಂಕ್‌ಗೆ ಕಡಿಮೆಯಿಲ್ಲದೆ ಕೆಲಸ ನಿರ್ವಹಿಸುತ್ತಿದೆ.

29 ಸಂಘಗಳಲ್ಲಿ ಸುಮಾರು 450 ಮಂದಿ ಸದಸ್ಯರಾಗಿದ್ದು, ಇದುವರೆಗೂ ಪ್ರತಿಯೊಬ್ಬರೂ ಸಾಲ ಪಡೆದುಕೊಂಡಿದ್ದು, ಯಾವುದೇ ತೊಂದರೆಯಿಲ್ಲದೆ ಸಾಲ ತೀರಿಸುತ್ತಿದ್ದಾರೆ. ಸಾಲ ನೀಡಲು ಯಾವುದೇ ರೀತಿ ನಿಯಮಗಳು ಇಲ್ಲದೆ, ಬರಿಯ ಒಂದು ಸಾಲದ ಅರ್ಜಿ ಸಲ್ಲಿಸುವುದರೊಂದಿಗೆ ಕೆಲಸ ಮುಗಿಯುತ್ತದೆ. ಇದೇ ರೀತಿ 2000ದಿಂದ ಹಿಡಿದು, 20,000ವರೆಗೂ, ಸಾಲ ನೀಡಿಕೆಯಾಗಿದ್ದು, ಅದು, ಯಶಸ್ವಿಯಾಗಿ ವಸೂಲಾಗಿದೆ.

*ಈ ಸ್ವಸಹಾಯ ಸಂಘಗಳು ಕನಿಷ್ಠ 12ರಿಂದ 20 ಮಂದಿ ಸದಸ್ಯರನ್ನು ಹೊಂದಿದ್ದು, ಪ್ರತಿ ಸಂಘವೂ ಮೂರು ಮಂದಿ ಪ್ರತಿನಿಧಿಗಳನ್ನು ಹೊಂದಿವೆ. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆದು, ಆರು ತಿಂಗಳ ಉಳಿತಾಯದ ನಂತರ ಸಾಲ ಪ್ರಕ್ರಿಯೆ ಆರಂಭವಾಗುತ್ತಿದೆ. ಸಾಲಕ್ಕೆ ಬಡ್ಡಿಯ ಮೊತ್ತ ಹೆಚ್ಚೆಂದರೆ 2% ಅಷ್ಟೇ. ಈಗ ಕೆಲವು ಸಂಘಗಳು 1%ಗೆ ಇಳಿಸಿವೆ. ಈ ಬಡ್ಡಿಯನ್ನು ಸಹ ಹಣಕಾಸು ವರ್ಷದ ಕಡೆಯಲ್ಲಿ ಸದಸ್ಯರಿಗೇ ಹಂಚಲಾಗುತ್ತಿದ್ದು, ಕಾರ್ಮಿಕರು ಸಂಘಕ್ಕೆ ರಾಜೀನಾಮೆ ಕೊಡುವಾಗ ಅವರ ಉಳಿತಾಯದೊಂದಿಗೆ ಸೇರಿಸಿ ಕೊಡಲಾಗುತ್ತಿದೆ.*

**ಕೆಲವು ಅಂಕಿ ಅಂಶಗಳು**

*(2007ರ ಮಾರ್ಚ್ 31ಕ್ಕೆ ಕೊನೆಗೊಂಡಂತೆ)*

| | | |
|---|---|---|
| *ಸಂಘಗಳು* | : | ***29*** |
| *ಒಟ್ಟು ಸದಸ್ಯರು* | : | ***438*** |
| *ಒಟ್ಟು ಉಳಿತಾಯ + ಬಡ್ಡಿ* | : | ***ರೂ. 13,27,703.00*** |
| *2006–2007 ರ ಸಾಲಿನಲ್ಲಿ ಪಡೆದ ಸಾಲದ ಮೊತ್ತ* | : | ***ರೂ. 14,16,000*** |



Scanned with OKEN Scanner

*ಸಾಲ ತೆಗೆದುಕೊಂಡ ಮುಖ್ಯ ಕಾರಣಗಳು: ಕಾರ್ಮಿಕರು ತಮ್ಮ ದಿನನಿತ್ಯದ ಜೀವನವನ್ನು ಯಾವುದೇ ಏರುಪೇರಿಲ್ಲದೆ ನಡೆಸಲು ಆಗುವುದಿಲ್ಲ. ನೂರಾರು ಕಾರಣಗಳಿಗಾಗಿ ಹಣದ ಅಗತ್ಯವಿದ್ದು, ಅವುಗಳಿಗೆಲ್ಲದಕ್ಕೂ ಸಾಲ ಮಾಡಲೇ ಬೇಕಾಗುತ್ತದೆ. ಸಂಘಗಳಿಂದ ಕಡಿಮೆ ಬಡ್ಡಿಗೆ, ಯಾವುದೇ ಹೆಚ್ಚಿನ ಕರಾರು ಪ್ರಕ್ರಿಯೆಗಳಿಲ್ಲದೆ ಮಹಿಳೆಯರು ಹಣ ಪಡೆಯುತ್ತಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖ ಕಾರಣಗಳು:*

- *ಮಕ್ಕಳ ಸ್ಕೂಲ್ ಅಡ್ಮಿಷನ್*
- *ಮಗಳ ಮದುವೆಗೆ*
- *ಮನೆ ಭೋಗ್ಯ*
- *ಬಡ್ಡಿ ಸಾಲ ತೀರಿಸಲು*
- *ಬಾಡಿಗೆ ಮನೆಗೆ ಅಡ್ವಾನ್ಸ್ ಕೊಡಲು*
- *ಸಾಲ ತೀರಿಸುವ ಸಲುವಾಗಿ*
- *ಒಡವೆ ಬಿಡಿಸುವ ಸಲುವಾಗಿ*
- *ಹಬ್ಬದ ಆಚರಣೆಗೆ*
- *ಗಂಡನ ಸಾಲ ತೀರಿಸಲು*
- *ಸೈಟ್ ತೆಗೆದುಕೊಳ್ಳಲು*

*ಸಂಘದ ಸದಸ್ಯರು ತಮ್ಮ ಅಗತ್ಯಗಳನ್ನು ಮಾತ್ರ ಪೂರೈಸಿಕೊಳ್ಳದೆ, ತಮ್ಮ ಸಹೋದ್ಯೋಗಿಗಳಿಗೆ ಯಾರಿಗಾದರೂ ಬಹಳ ತುರ್ತು ಪರಿಸ್ಥಿತಿ ಒದಗಿದಾಗಲೂ ಸಾಲ ಕೊಡಿಸಿ, ಅವರ ಕಷ್ಟಕ್ಕೆ ನೆರವಾಗಿದ್ದಾರೆ. ಅವುಗಳಲ್ಲಿ ಕೆಲವು,*

1. *ಚೀಟಿ ವ್ಯವಹಾರದಲ್ಲಿ ಮೋಸಹೋದ ಕಾರ್ಮಿಕರೊಬ್ಬರಿಗೆ ಸಾಲ ಕೊಡಿಸಿರುವುದು.*
2. *ಸ್ನೇಹಿತೆಯ ಮಗನ ಸ್ಕೂಲ್ ಅಡ್ಮಿಷನ್,*
3. *ಸಾಲದ ಹೊರೆ ತಾಳಲಾರದೆ ಆತ್ಮಹತ್ಯೆಯಂತಹ ನಿರ್ಧಾರ ಕೈಗೊಳ್ಳುವ ಸಂದರ್ಭದಲ್ಲಿದ್ದ ಗೆಳತಿಗೆ ಸಾಲ ನೀಡಿ ಅವಳಿಗೆ ನೆರವಾದದ್ದು.*

ತಿಂಗಳಿಗೊಮ್ಮೆ ಸೇರುವ ಈ ಸಂಘಗಳ ಸಭೆಯಲ್ಲಿ, ಈ ಕಾರ್ಮಿಕರು ಕ್ರಮೇಣ, ಕಾರ್ಮಿಕ ಹಕ್ಕುಗಳು, ಪಿ.ಎಫ್, ಇ.ಎಸ್.ಐ, ಬಗ್ಗೆ, ಜೆಂಡರ್ ಬಗ್ಗೆ, ನಾಯಕತ್ವ ಬೆಳವಣಿಗೆ, ಕಾರ್ಮಿಕ ಕಾನೂನುಗಳು ಇತ್ಯಾದಿಗಳ ಬಗ್ಗೆ ಅವರಿಗೆ ತರಬೇತಿಗಳನ್ನು ನೀಡುತ್ತಾ ಅವರತ್ತ ಸಂಘಟನೆಯತ್ತ ಪ್ರೇರೇಪಿಸಲಾಯಿತು. ಕಾರ್ಮಿಕರನ್ನು ಸಂಘಟಿಸುವ ಪ್ರಕ್ರಿಯೆ ಇಂತಹ ಒಂದು ಸಣ್ಣ ಹೆಜ್ಜೆಯೊಂದಿಗೆ ಆರಂಭವಾದದ್ದು, ಇಂದು, "ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ" ಹಾಗೂ "ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್" ಎಂಬ ಸಂಘಟನೆಯನ್ನು ಕಟ್ಟುವಲ್ಲಿ ಯಶಸ್ವಿಯಾಗಿದೆ.

ಆದರೆ, ಈ ಎರಡೂ ಸಂಘಟನೆಗಳನ್ನು ಕಟ್ಟಿ ತಮ್ಮ ಕೆಲಸದ ವಾತಾವರಣವನ್ನು ಸುಧಾರಿಸಲು ಕಾರ್ಮಿಕರು ಪ್ರಯತ್ನ ಪಟ್ಟಂತೆಯೇ, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿಯೂ ಈ ಸಂಘಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ನಗರ ಪ್ರದೇಶದಲ್ಲಿ ಸ್ವಸಹಾಯ ಸಂಘಗಳು ವಿಫಲವಾಗಿದೆ ಎಂಬ ಅಭಿಪ್ರಾಯವನ್ನು ಸುಳ್ಳು ಮಾಡುವಂತೆ ಈ ಸ್ವಸಹಾಯ ಸಂಘಗಳು ಯಾವುದೇ ಬ್ಯಾಂಕಿನ ಸಾಲ ಸಹಾಯವಿಲ್ಲದೆ ತನ್ನದೇ ಉಳಿತಾಯದ ಹಣದಿಂದ ತನ್ನ ಸದಸ್ಯರಿಗೆ ಗಣನೀಯ ಮೊತ್ತದ ಸಾಲವನ್ನು ನೀಡಿ ಅವರ ಆಪತ್ಕಾಲಕ್ಕೆ ಒದಗುತ್ತಿದೆ. ಜೊತೆಗೆ ಕುಟುಂಬದ ಮಟ್ಟದಲ್ಲಿ ತನ್ನ ಸದಸ್ಯರ ಸ್ಥಾನಮಾನವನ್ನು ಹೆಚ್ಚಿಸಲು ನೆರವಾಗಿದೆ.

ಕಾಲಕಾಲಕ್ಕೆ ಸರಿಯಾಗಿ ಈ ಸಂಘಗಳಿಗೆ ತರಬೇತಿ ನೀಡಿದ ನಬಾರ್ಡ್‌ನ ಜನರಲ್ ಮ್ಯಾನೇಜರ್ ಆಗಿದ್ದ, ಶ್ರೀ ವಿ. ಗುಂಡೂರಾವ್ ಅವರಿಗೆ, ಕೆನರಾ ಬ್ಯಾಂಕ್‌ನ ಶ್ರೀ ಎರ್ರಿಸ್ವಾಮಿ ಅವರಿಗೂ, ಸಂಘಗಳ ಮೇಲ್ವಿಚಾರಣೆ ನಡೆಸುತ್ತಿರುವ ಸಿವಿಡೆಪ್ ಸಂಸ್ಥೆಯ ಕಾರ್ಯಕರ್ತರಿಗೂ ಮುನ್ನಡೆ ಧನ್ಯವಾದಗಳನ್ನು ಅರ್ಪಿಸುತ್ತಿದೆ.

***ಕಾರ್ಮಿಕರು ಸಂಘ ರಚಿಸಿಕೊಳ್ಳಲು ಯಾವುದೇ ಮಾಹಿತಿ, ಬೇಕಾದಲ್ಲಿ ಈ ಸಂಖ್ಯೆಯಲ್ಲಿ ಸಂಪರ್ಕಿಸಿ. 9844959210***

❑

## ಮತ್ತೊಂದು ಆ್ಯಸಿಡ್ ದಾಳಿ! ಸಾವು!

ಮಾನವ ನಿರ್ಮಿತ ಆ್ಯಸಿಡ್ ಮತ್ತೊಂದು ಅಮಾಯಕ ಮಹಿಳೆಯನ್ನು ಬಲಿ ತೆಗೆದುಕೊಂಡಿದೆ. ಮೈಸೂರಿನಲ್ಲಿ ಗಂಡನ ಕೈಯಿಂದಲೇ ಆ್ಯಸಿಡ್ ದಾಳಿಗೆ ಒಳಗಾಗಿ ಸಾವಿಗೀಡಾದ ಹಿನಾ ಫಾತಿಮಾ ಈ ಪಟ್ಟಿಯಲ್ಲಿ ಮತ್ತೊಂದು ಹೆಸರಾದರು.

ಮಹಿಳೆಯರನ್ನು ಅವರ ಮೂಲದಿಂದಲೇ ಇಲ್ಲವಾಗಿಸುವ ಈ ಕೃತ್ಯಕ್ಕೆ ಕೊನೆಯೇ ಇಲ್ಲವೇ? ನಮ್ಮನ್ನು ಕಾಯುವ ಸರ್ಕಾರ ಇದನ್ನು ಕಂಡು ಕಣ್ಣು ಮುಚ್ಚಿಕೊಂಡಿದೆಯೇ? ಅಂಗಡಿಗಳಲ್ಲಿ ಆ್ಯಸಿಡ್ ಸುಲಭವಾಗಿ ದೊರೆತರೆ ಯಾರು ಬೇಕಾದರು ಇದನ್ನು ಒಳ್ಳೆಯದಕ್ಕೂ, ಕೆಟ್ಟದಕ್ಕೂ ಸುಲಭವಾಗಿ ಬಳಸಬಹುದು. ಈ ದೌರ್ಜನ್ಯ ಕೊನೆಗೊಳ್ಳಬೇಕೆಂದು ಸುಮಾರು 5 ವರ್ಷಗಳಿಂದ, 'ಮಹಿಳೆಯರ ಮೇಲಿನ ಆ್ಯಸಿಡ್ ದಾಳಿ ವಿರೋಧೀ ಪ್ರಚಾರಾಂದೋಲನ ಮತ್ತು ಹೋರಾಟ (CSAAAW)ವು, ಸತತ ಹೋರಾಟ ನಡೆಸುತ್ತಿದೆ.

ಆ್ಯಸಿಡ್ ಮಾರಾಟ ನಿಯಂತ್ರಣ, ದಾಳಿಗೆ ಒಳಗಾದವರ ಪುನರ್ವಸತಿಯೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು, 'ಸಿಸಾ'ವು ಹೋರಾಟ ನಡೆಸುತ್ತಿದೆ. ಈ ಹೋರಾಟಕ್ಕೆ ಮುನ್ನಡೆಯ ಸಂಪೂರ್ಣ ಬೆಂಬಲ ಸೂಚಿಸುತ್ತಾ, ಆ್ಯಸಿಡ್ ದಾಳಿಯಿಂದ ಜರ್ಜರಿತರಾದ ಮಹಿಳೆಯರಿಗೆ ನ್ಯಾಯ ಒದಗಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸುತ್ತಿದೆ.

"ಯಾಕೇ ಕೆಲಸಕ್ಕೆ ಬರ್ತಾ ಇಲ್ಲ?"

"ಓ ಅಯ್ಯೋ ಅವನು ಕೊಡೋ ಪಿಂಸೆಗೆ, ಅಷ್ಟು ಕಡಿಮೆ ಪೇಮೆಂಟ್‌ಗೆ ಯಾರು ಅಲ್ಲಿಗೆ ಹೋಗ್ತಾರೆ? ನಮ್ಮ ಮನೆ ಹತ್ರಾನೆ ಒಂದು ಫ್ಯಾಕ್ಟರಿ ಒಪನ್ ಆಗಿದೆ. ಇ.ಎಸ್.ಐ. ಪಿ.ಎಫ್. ಏನೂ ಹಿಡ್ಯಲ್ಲ, ಪೇಮೆಂಟ್ ಪೂರ್ತಿ ಕೈಗೆ ಬರುತ್ತೆ ಒಂದೈದು ನಿಮಿಷ ತಡ ಆದ್ರೂ ಒಳಗೆ ಬಿಡ್ತಾನೆ. ಅಲ್ಲಿಗೇ ಹೋಗ್ತಿದೀನಿ"

ಈಚಿನ ದಿನಗಳಲ್ಲಿ ಕಾರ್ಮಿಕರ ಮಧ್ಯೆ ಇದು ಇಂದು ಸಾಮಾನ್ಯ ಸಂಭಾಷಣೆಯಾಗಿದೆ. ಆದರೆ ಇವರೇ ಮುಂದೊಂದು ದಿನ,


"ಅಯ್ಯೋ ಯಾವಾಗ್ಲೂ ಕೆಲ್ಸ ಇಲ್ಲ ಅಂತ ರಜಾ ಕೊಡ್ತಾನೆ, ಪೇಮೆಂಟ್ ಸರಿಯಾಗಿ ಹೇಳಿದ ಡೇಟ್‌ಗೆ ಕೊಡಲ್ಲ, ನಾವು ಮನೆ ಬಾಡ್ಗೆ, ಸಾಮಾನು ಮಕ್ಳ ಫೀಸು ಎಲ್ಲದಕ್ಕೂ ಎಲ್ಲಿ ಹೋಗ್ಬೇಕು? ಮೂರು ತಿಂಗಳಿಂದ ಸರಿಯಾಗಿ ಪೇಮೆಂಟೇ ಕೊಟ್ಟಿಲ್ಲ" ಎಂದೋ,

"ಕೆಲಸ ಇಲ್ಲ ಅಂತ ಒಂದು ವಾರ ರಜಾ ಕೊಟ್ಟಿದ್ರು, ಈಗ ನೋಡಿದ್ರೆ ಫ್ಯಾಕ್ಟರಿ ಬಾಗಿಲು ಮುಚ್ಚಿಕೊಂಡು ಹೋಗಿದ್ದಾನೆ" ಎಂದೋ,

"ಪ್ರತೀ ತಿಂಗಳೂ ಪಿ.ಎಫ್ ಕಟ್ ಮಾಡ್ತಾ ಇದ್ದ, ನೋಡಿದ್ರೆ ಪಿ.ಎಫ್‌ಗೆ ಕಟ್ಟೇ ಇಲ್ಲ" ಎಂದೋ ಗೋಳಾಡುತ್ತಿದ್ದಾರೆ.

ಇದೇಕೆ ಹೀಗೆ?

"ಬೆಂಗಳೂರಿನಲ್ಲಿ, 2004 ಡಿಸೆಂಬರ್‌ನಿಂದ ಕೋಟಾ ಪದ್ಧತಿ ರದ್ದಾದ ನಂತರ, ಗಾರ್ಮೆಂಟ್ಸ್ ಫ್ಯಾಕ್ಟರಿಗಳ ಸಂಖ್ಯೆ ಈಗಿರುವುದಕ್ಕಿಂತ ಎರಡರಷ್ಟಾಗುತ್ತದೆ. ಕಂಪನಿಗಳ ನಡುವೆ ಪೈಪೋಟಿ ನಡೆಯುತ್ತದೆ, ಕಾರ್ಖಾನೆಗಳು ಹೆಚ್ಚಾದಷ್ಟೂ ಕಾರ್ಮಿಕರ ಶೋಷಣೆ ಹೆಚ್ಚಾಗುತ್ತದೆ" ಎಂದು ಸುಮಾರು 4 ವರ್ಷಗಳಿಂದಲೂ ವಿಶ್ಲೇಷಣಾಕಾರರು ಅಭಿಪ್ರಾಯ ಪಡುತ್ತಿದ್ದರು.




ಇದು ಈಗ ಬರಿಯ ಅಭಿಪ್ರಾಯವಾಗಿರದೆ, ವಾಸ್ತವ ಸ್ಥಿತಿಯಾಗಿದೆ ಎಂದು ಮೇಲಿನ ಸಂಭಾಷಣೆಗಳಿಂದ ತಿಳಿಯುತ್ತಿದೆ. ಮೈಸೂರು ರಸ್ತೆಯೊಂದನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಸುಮಾರು 15 ರಿಂದ 20 ಸಣ್ಣ ಪುಟ್ಟ ಫ್ಯಾಕ್ಟರಿಗಳು ಹುಟ್ಟಿಕೊಂಡಿವೆ. ಆದರೆ ಇವು ಯಾವೂ ಎಕ್ಸ್‌ಪೋರ್ಟ್ ಕಂಪನಿಯಲ್ಲ, ಜಾಬ್‌ವರ್ಕ್ ಮಾಡುವ ಸಣ್ಣ ಸಣ್ಣ ಕಾರ್ಖಾನೆಗಳು. ಎಕ್ಸ್‌ಪೋರ್ಟ್ ಕಂಪನಿಗಳು ತಮಗೆ ಮಾಡಲಾಗದಂತಹ ಹೆಚ್ಚಾದ ಆರ್ಡರ್‌ಅನ್ನು ಈ ಫ್ಯಾಕ್ಟರಿಗಳಿಗೆ ಕೊಡುವುದರಿಂದ ಇವು ನಡೆಯುತ್ತವೆ. ಈ ಕಾರ್ಖಾನೆಗಳಲ್ಲಿ ಯಾವುದೇ ರೀತಿಯ ಕಾರ್ಮಿಕ ಕಾನೂನುಗಳನ್ನು ಪಾಲಿಸುತ್ತಿಲ್ಲ.

ಈ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಇಂದು ಅತ್ಯಂತ ಶೋಷಣೆಗೆ ಒಳಗಾಗುತ್ತಿದ್ದಾರೆ. ಹೆಚ್ಚಿನ ಕಾರ್ಮಿಕರಿಗೆ ಮಾತ್ರ ಇದು ಜಾಬ್‌ವರ್ಕಾ? ಎಕ್ಸ್‌ಪೋರ್ಟಾ? ಇವುಗಳ ನಡುವಿನ ವ್ಯತ್ಯಾಸವೇನು? ತಮಗೆ ಸಿಗಬೇಕಾದ ಸೌಲಭ್ಯಗಳಾವುವು? ಏನೂ ತಿಳಿದಿಲ್ಲ. ಮನೆಗೆ ಹತ್ತಿರವೆಂದು, ಇ.ಎಸ್.ಐ ಪಿ.ಎಫ್ ಹಿಡಿಯುವುದಿಲ್ಲವೆಂದು, ಸಮಯದ ಬಗ್ಗೆ ಹೆಚ್ಚು ನಿಯಮಗಳಿಲ್ಲವೆಂದು ಈ ಫ್ಯಾಕ್ಟರಿಗಳಿಗೆ ಕೆಲಸಕ್ಕೆ ಸೇರುತ್ತಿದ್ದಾರೆ.

ಈ ಕಾರ್ಖಾನೆಗಳಲ್ಲಿ ಉಲ್ಲಂಘಿಸುತ್ತಿರುವ ಕೆಲವು ಕಾರ್ಮಿಕ ಕಾನೂನುಗಳು

- ಕನಿಷ್ಠ ವೇತನ ನೀಡದಿರುವುದು,
- ಪಿ.ಎಫ್, ಇ.ಎಸ್.ಐ ನೀಡದಿರುವುದು,
- ಬೋನಸ್ ಕೊಡದಿರುವುದು,
- ವೇತನ ಚೀಟಿ ಇಲ್ಲದಿರುವುದು
- ಪಿ.ಎಫ್ ಹಣ ವೇತನದಲ್ಲಿ ಕಡಿತಗೊಳಿಸಿ ಅದನ್ನು ಪಿ.ಎಫ್ ಇಲಾಖೆಗೆ ಕಟ್ಟದೆ ಇರುವುದು
- ಕಾರ್ಖಾನೆಯನ್ನು ಇದ್ದಕ್ಕಿದ್ದಂತೆ ಮುಚ್ಚುವುದು,
- ಅನಿರ್ದಿಷ್ಟ ಕಾಲ ರಜೆ ಘೋಷಿಸಿ, ಕಾರ್ಮಿಕರಿಗೆ ಅರ್ಧ ಸಂಬಳ ನೀಡುತ್ತಿರುವುದು

ಕಾರ್ಮಿಕರು ನ್ಯಾಯಕ್ಕಾಗಿ ಕಾರ್ಮಿಕ ಇಲಾಖೆಗೆ ದೂರು ನೀಡಿದರೆ ಅಲ್ಲಿ ಸಿಗುತ್ತಿರುವ ಫಲಿತಾಂಶ ಸೊನ್ನೆ. ಹೀಗೆ ಮುಚ್ಚಿಹೋಗಿರುವ, ಕಾರ್ಖಾನೆಗಳ ವಿರುದ್ಧ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಕಾರ್ಮಿಕ ಇಲಾಖೆಯಲ್ಲಿ ಸಲ್ಲಿಸಿರುವ ದೂರು ಅಲ್ಲಿಯೇ ಧೂಳು ತಿನ್ನುತ್ತಿದೆಯೇ ಹೊರತು ಕಾರ್ಮಿಕರಿಗೆ ನ್ಯಾಯ ದೊರಕಿಲ್ಲ.

ಎಕ್ಸ್‌ಪೋರ್ಟ್ ಫ್ಯಾಕ್ಟರಿಗಳು ತಮಗೆ ಹೆಚ್ಚಾದ ಕೆಲಸವನ್ನು ಕೊಡುವುದರ ಆಧಾರದ ಮೇಲೆ ನಡೆಯುವ ಈ ಫ್ಯಾಕ್ಟರಿಗಳ ಕೆಲಸ ಕಾರ್ಯಗಳು ಎಕ್ಸ್‌ಪೋರ್ಟ್ ಫ್ಯಾಕ್ಟರಿಗಿಂತ ಭಿನ್ನವಾಗಿರುವುದಿಲ್ಲ. ಆದರೆ. ಲಾಭದ ಆಸೆಗೆ ಮಾಲೀಕರು ಬೇರೆಲ್ಲೂ ರಾಜಿಯಾಗಲು ಸಾಧ್ಯವಿಲ್ಲ. ಅಂತಿಮವಾಗಿ ಕಾರ್ಮಿಕರನ್ನು ಗುರಿಯಾಗಿಸಿಕೊಳ್ಳುತ್ತಾರೆ.

ವಿಶ್ವ ಜಾಗತೀಕರಣದ ಈ ಸಂದರ್ಭದಲ್ಲಿ ಕಾರ್ಮಿಕರು ಅತ್ಯಂತ ಶೋಷಣೆಗೊಳಗಾಗುತ್ತಾರೆ ಎಂಬ ಅಭಿಪ್ರಾಯ ಈಗ ಅಕ್ಷರಶ: ನಿಜವಾಗುತ್ತಿದೆ. ಇದಕ್ಕೆ ಯಾರು ಹೊಣೆ? ಜಾಬ್ ವರ್ಕ್ ಕಾರ್ಖಾನೆಗಳಿಗೆ ಸೇರುತ್ತಿರುವ ಕಾರ್ಮಿಕರದು ನಾವು ತಪ್ಪು ಎನ್ನಲಾಗುವುದಿಲ್ಲ. ಈ ಕಾರ್ಖಾನೆಗಳಿಗೆ ಕೆಲಸ ಕೊಡುತ್ತಿರುವ ದೊಡ್ಡ ಫ್ಯಾಕ್ಟರಿಗಳು ಈ ಹೊಣೆಯನ್ನು ಹೊರಬೇಕಾಗುತ್ತದೆ. ಇಲ್ಲದಿದ್ದರೆ ಇವೆರಡೂ ಕಾರ್ಖಾನೆಗೆ ಕೆಲಸ ಕೊಡುವ "ಮೂಲ ಮಾಲೀಕ (Principal Employer)" ಅಂದರೆ ಬ್ರಾಂಡ್‌ಗಳು ಈ ಕಾರ್ಮಿಕರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕೆಂದು ಮುನ್ನಡೆ ಆಗ್ರಹಿಸುತ್ತಿದೆ.

ಇದರೊಂದಿಗೆ, ಪಿ.ಎಫ್. ಇಲಾಖೆಯೂ ಸಹ ಒಂದು ಸರ್ವೆ ನಡೆಸಿ, ಸದಸ್ಯ ಕಾರ್ಖಾನೆಗಳು ಪಿ.ಎಫ್ ಹಣವನ್ನು ಕಟ್ಟದಿದ್ದಲ್ಲಿ, ಬಲವಾದ ಕ್ರಮ ಕೈಗೊಳ್ಳಬೇಕು ಎಂದು ಮುನ್ನಡೆ ಆಗ್ರಹಿಸುತ್ತದೆ. □

# ಇ.ಎಸ್.ಐ – ಕಾರ್ಮಿಕರ ರಾಜ್ಯ ವಿಮಾ ಯೋಜನೆ

ಭಾರತ ಸರ್ಕಾರವು ಕಾರ್ಮಿಕರ ಆರೋಗ್ಯ ವಿಮೆ ಹಾಗೂ ಚಿಕಿತ್ಸೆಯ ದೃಷ್ಟಿಯಿಂದ ಕರ್ನಾಟಕ ರಾಜ್ಯ ವಿಮಾ ನಿಗಮವನ್ನು ಸ್ಥಾಪಿಸಿದೆ. ಇದರಲ್ಲಿ ಕಾರ್ಮಿಕರಲ್ಲದೆ, ಪ್ರಮುಖವಾಗಿ ಇ.ಎಸ್.ಐ ನಿಗಮ, ಮಾಲೀಕರು ಹಾಗೂ ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳ ಪಾತ್ರವಿರುತ್ತದೆ. ಪ್ರತಿಯೊಬ್ಬರಿಗೂ ಅವರದೇ ಅದ ಜವಾಬ್ದಾರಿಗಳಿರುತ್ತವೆ. ಅವು ಯಾವುವೆಂದು ತಿಳಿಯುವ ಪ್ರಯತ್ನ ಇಲ್ಲಿದೆ.

### ಮಾಲೀಕರ ಜವಾಬ್ದಾರಿಗಳು

- ವಿಮೆಯ ಸದಸ್ಯರಿಗೆ (ಕಾರ್ಮಿಕರಿಗೆ) ಡಿಕ್ಲರೇಶನ್ ಫಾರಂ ಅನ್ನು ವಿತರಿಸುವುದು
- ಪ್ರಥಮ ಚಿಕಿತ್ಸೆ ಹಾಗೂ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡುವುದು
- ದಾಖಲೆಗಳನ್ನು ನಿರ್ವಹಿಸುವುದು
- ಅಪಘಾತ / ಸಾವಿನ ವರದಿ ನೀಡುವುದು
- ಅನಾರೋಗ್ಯ/ಕೈಲಾಗದ ಕಾರ್ಮಿಕರಿಗೆ ಕೆಲಸ ಮಾಡದಂತೆ ಖಚಿತ ಪಡಿಸಿಕೊಳ್ಳುವುದು
- ಸರಿಯಾದ ಅವಧಿಗೆ ಇ.ಎಸ್.ಐ ನಿಗಮದೊಂದಿಗೆ ನೋಂದಾಯಿಸಿಕೊಳ್ಳುವುದು
- ಇ.ಎಸ್.ಐ ವಂತಿಗೆಯನ್ನು ಸಮಯಕ್ಕೆ ಸರಿಯಾಗಿ ಪಾವತಿಸುವುದು
- ಇ.ಎಸ್.ಐ. ಅಧಿಕಾರಿಗಳು ಬಂದಾಗ ಅವರಿಗೆ ಪರಿಶೀಲಿಸಲು ಸಹಕರಿಸುವುದು
- ಸಮಯಕ್ಕೆ ಸರಿಯಾಗಿ ವರದಿಗಳನ್ನು ಸಲ್ಲಿಸುವುದು

### ಆರೋಗ್ಯ ಸಂಸ್ಥೆಗಳು, ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳ ಜವಾಬ್ದಾರಿ

- ಸರಿಯಾದ, ಸೂಕ್ತವಾದ ಚಿಕಿತ್ಸೆ ಔಷಧಿ ಸೌಲಭ್ಯವನ್ನು ಒದಗಿಸುವುದು
- ವಿಶೇಷ ಚಿಕಿತ್ಸೆಗೆ ಬೇಕಾದ ಸಲಕರಣೆಗಳು ಇಲ್ಲದಿದ್ದಲ್ಲಿ, ಸಾಕಷ್ಟು ಸೌಲಭ್ಯವಿರುವ ಆಸ್ಪತ್ರೆಯನ್ನು ಒದಗಿಸುವುದು
- ಕಾರ್ಮಿಕರಿಗೆ ಮೆಡಿಕಲ್ ಸರ್ಟಿಫಿಕೇಟ್ ಕೊಡುವುದು

### ಇ.ಎಸ್.ಐ ನಿಗಮದ ಜವಾಬ್ದಾರಿ

- ಫಲಾನುಭವಿ (ಕಾರ್ಮಿಕರಿಗೆ) ಸರಿಯಾದ ನಗದು ಸೌಲಭ್ಯ ಒದಗಿಸುವುದು. (ಅನಾರೋಗ್ಯ, ಹೆರಿಗೆ, ಅಂಗವಿಕಲರಿಗೆ)




- ಕಾರ್ಮಿಕರು ದೂರುವ ಪ್ರತಿ ವಿಷಯದ ಬಗ್ಗೆಯೂ ಗಮನ ಹರಿಸುವುದು
- ಕಾರ್ಖಾನೆ ಹಾಗೂ ಆಸ್ಪತ್ರೆಗಳನ್ನು ಸರಿಯಾಗಿ, ಸೂಕ್ತವಾಗಿ ಮೇಲ್ವಿಚಾರಣೆ ಮಾಡುವುದು
- ಕಾರ್ಖಾನೆಯವರು ಇ.ಎಸ್.ಐ ನಿಗಮದ ನಿಯಮಗಳನ್ನು ಸರಿಯಾಗಿ ಪಾಲಿಸುತ್ತಿದ್ದಾರೆಯೇ ಎಂದು ಗಮನಿಸುವುದು

### ಕಾರ್ಮಿಕರು ಎದುರಿಸುತ್ತಿರುವ ಕೆಲವು ತೊಂದರೆಗಳು

**ಮಾಲೀಕರೊಂದಿಗೆ:**

- ಇ.ಎಸ್.ಐ ಕಾರ್ಡ್ ಅನ್ನು ಸರಿಯಾಗಿ ವಿತರಿಸದಿರುವುದು,
- ಪ್ರಥಮ ಚಿಕಿತ್ಸೆ ಹಾಗೂ ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಸಾಗಿಸುವ ಯವುದೇ ಸೌಲಭ್ಯವಿಲ್ಲದಿರುವುದು
- ಹೆರಿಗೆ ರಜೆ ಮುಗಿಸಿಕೊಂಡು ಬಂದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳದಿರುವುದು

**ಆಸ್ಪತ್ರೆಯೊಂದಿಗೆ:**

- ಸರಿಯಾದ ಚಿಕಿತ್ಸೆ ದೊರಕದಿರುವುದು
- ಔಷಧಿಗಳ ಕೊರತೆ
- ಸೌಲಭ್ಯಗಳ ಕೊರತೆ
- ಲಂಚ ಕೊಡುವಂತೆ ಒತ್ತಾಯಿಸುವುದು
- ಇ.ಎಸ್.ಐ ನಿಗಮದೊಂದಿಗೆ

**ನಗದು ಸೌಲಭ್ಯ:**

- ದೂರಿನ ಬಗ್ಗೆ ಗಮನ ಹರಿಸದಿರುವುದು
- ಲಾಭಗಳನ್ನು ವಿತರಿಸುವಾಗ ವಿಳಂಬ ಮಾಡುವುದು ❑

## ಕಾರ್ಮಿಕರೇ ಆಯೋಜಿಸುತ್ತಿರುವ ತರಬೇತಿ ಕಾರ್ಯಕ್ರಮಗಳು

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳಲು ಮತ್ತೊಂದು ಕಾರ್ಯತಂತ್ರ ರೂಪಿಸಿದ್ದಾರೆ. ವಿವಿಧ ಸ್ಥಳಗಳಲ್ಲಿನ ಮುನ್ನಡೆಯ ಲೋಕಲ್ ಕಮಿಟಿಗಳ ಸದಸ್ಯರು ತಾವು ವಾಸ ಮಾಡುವ ಏರಿಯಾಗಳಲ್ಲಿರುವ ಗಾರ್ಮೆಂಟ್ಸ್ ಕಾರ್ಮಿಕರನ್ನು ಸಂಘಟಿಸಿ, ತಮಗೆ ತಿಳಿಯದ ಹಲವಾರು ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಮನೆಯ ಸುತ್ತಮುತ್ತಲಿರುವ ಮಹಿಳೆಯರೇ ತಮಗೆ ಹತ್ತಿರವಾಗುವಂತಹ ಸ್ಥಳಗಳನ್ನು ಹುಡುಕಿ ಸುಮಾರು 40ರಿಂದ 50 ಮಂದಿಯನ್ನು ಸೇರಿಸಿ ತರಬೇತಿಯನ್ನು ಪಡೆಯುತ್ತಿದ್ದಾರೆ. ಕಾರ್ಮಿಕ ಕಾನೂನುಗಳು, ಪಿ.ಎಫ್. ಹಾಗೂ ಇ.ಎಸ್.ಐ. ಸೌಲಭ್ಯಗಳು ಇನ್ನೂ ಕೆಲವು ವಿಷಯಗಳ ಬಗ್ಗೆ ಈ ತರಬೇತಿ ನಡೆಯುತ್ತಿದೆ. ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಮುನ್ನಡೆ ಒದಗಿಸಿಕೊಡುತ್ತಿದೆ. ಇಲ್ಲಿಯವರೆಗೂ ಕಸ್ತೂರಿಬಾ ನಗರ, ಪೀಣ್ಯ 2ನೇ ಹಂತ, ನಾಯಂಡಹಳ್ಳಿ, ಮಾದಾವರಗಳಲ್ಲಿ ತರಬೇತಿ ನಡೆದು ಕಾರ್ಮಿಕರು ಉತ್ಸಾಹದಿಂದ ಭಾಗವಹಿಸಿದ್ದಾರೆ.

ಈ ತರಬೇತಿಯನ್ನು ಆಯೋಜಿಸುತ್ತಿರುವವರು ಕಾರ್ಮಿಕರೇ ಆದ್ದರಿಂದ ಅವರಲ್ಲಿ ನಾಯಕತ್ವ ಗುಣ ಬೆಳೆಯಲು ಈ ತರಬೇತಿ ಕಾರ್ಯಕ್ರಮಗಳು ಸಹಾಯವಾಗುತ್ತಿವೆ.




Scanned with OKEN Scanner

## ಕಾಮನಬಿಲ್ಲು

# ಶುಭಾಶಯಗಳು



→
ಕವನ
ಹುಟ್ಟಿದ ದಿನಾಂಕ: 15-08-2001
ತಾಯಿ : ಸುಮಾ
ಕಾರ್ಖಾನೆ : ಸೋನಾಲ್ ಗಾರ್ಮೆಂಟ್ಸ್



←
ಪ್ರೇಂಕುಮಾರ್
2006–2007ರ ಸಾಲಿನ
ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ
ಶೇ. 74 ಅಂಕಗಳನ್ನು ಗಳಿಸಿದ್ದಾರೆ.
ತಾಯಿ : ಲಲಿತಾ
ಕಾರ್ಖಾನೆ : ಎಸ್.ಎನ್.ಎಸ್.



ಎಲ್.ಟಿ. ಕಾರ್ಲೆ ಕಾರ್ಖಾನೆಯ ಕಾರ್ಮಿಕರಾದ ಶ್ರೀಮತಿ ಶ್ವೇತಾ ಹಾಗೂ ಜಗದೀಶ್ ದಂಪತಿಗಳ ವಿವಾಹ ವಾರ್ಷಿಕೋತ್ಸವ(1–7–2002)ಕ್ಕೆ ಸೂಜಿ–ದಾರ ಬಳಗ ಶುಭ ಹಾರೈಸುತ್ತದೆ.

## 2006–07ನೇ ಸಾಲಿನ ಬೋನಸ್ ಪಾವತಿ

ಸ್ನೇಹಿತರೇ,

2007 ಮಾರ್ಚ್‌ವರೆಗೂ ತಾವು ಯಾವುದಾದರು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದಲ್ಲಿ, ಆ ಕಾರ್ಖಾನೆಯಿಂದ ತಮಗೆ 2006–07ನೇ ಸಾಲಿನ ಬೋನಸ್ ಸಿಗಲೇಬೇಕು. ಕೆಲಸ ಬಿಟ್ಟ ಕಾರ್ಮಿಕರಿಗೂ ಸಹ ಈ ಬೋನಸ್ ಕಡ್ಡಾಯವಾಗಿ ಸಿಗಬೇಕು. ಕಾರ್ಖಾನೆಯ ಮಾಲೀಕರು ಕೆಲಸಬಿಟ್ಟ ಕಾರ್ಮಿಕರಿಗೆ ಬೋನಸ್ ನೀಡುವುದಿಲ್ಲವೆಂದು ನಿರಾಕರಿಸಿದರೆ ಸಹಾಯ ಮಾಡಲು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಇದೆ. ದಯವಿಟ್ಟು ಬೋನಸ್ ನಿರಾಕರಿಸಲ್ಪಟ್ಟ ಕಾರ್ಮಿಕರು ತಮ್ಮ ಹಕ್ಕಾದ ಬೋನಸನ್ನು ಪಡೆಯಲು GATWU ವನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಿ.

**ಮೊಬೈಲ್ : 99808 63795**

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

ಸಿವಿಡೆಪ್ ಇಂಡಿಯಾ
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು–29
ದೂ.: 26751320,

ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 27, 5ನೇ ಮುಖ್ಯರಸ್ತೆ
   6ನೇ ಅಡ್ಡರಸ್ತೆ, ಸಂಪಂಗಿರಾಮನಗರ
   ಬೆಂಗಳೂರು – 560 027.
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ ಬೆಂಗಳೂರು–560009
   ದೂ.: 22216485
3. **ವನಿತಾ ಸಹಾಯವಾಣಿ**
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
4. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–38
   ದೂ.: 25492781 / 25492782
5. **ಪರ್ಯಾಯ ಕಾನೂನು ವೇದಿಕೆ (ALF)**
   ನಂ.4, 3ನೇ ಅಡ್ಡರಸ್ತೆ
   8ನೇ ಮುಖ್ಯರಸ್ತೆ,
   ವಸಂತನಗರ, ಬೆಂಗಳೂರು–560052
   ದೂ.: 22356845
6. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ಅರಮನೆ ರಸ್ತೆ, ಬೆಂಗಳೂರು
   ದೂ.: 22268073 / 22203068

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ, 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ–560026. ದೂ. : 2675 1320
ಪ್ರಕಾಶಕರು : ಸಿವಿಡೆಪ್–ಇಂಡಿಯಾ. ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 32715773 / 26757159

Scanned with OKEN Scanner